SET A

| Question Paper Booklet Sl.No. | |
|---|---|

# K-TET - August 2012

**Roll No.** | | | | | | |

| **Category - I** | **Part - 2** |
|---|---|

| Question Paper Code | Area/Subjects | No.of Questions | Sl.No.of Questions | Sl.No.of Pages |
|---|---|---|---|---|
| **504** | Kannada | 30 | 91 to 120 | 3 to 10 |

(Candidates for Kannada Only)

Space for Rough Work - Page No. : 2 & 11

Instructions - Page No. : 1 & 12

**Instructions :**

**Candidates are advised to read the following instructions very carefully.**

Non-compliance of any of these may result in cancellation of the answer sheet.

1. Don't open the Booklet seal before time. **Before attempting the papers, the candidates should make sure that no page or question is missing from the question paper**. In case there is any discrepancy, it should be immediately reported to the invigilator incharge for obtaining a complete question paper.

2. Candidates should occupy only the allocated seat at the venue of the allotted centre as per seating plan.

3. **Use only Blue / Black Ball point pen for answering objective (multiple choice) questions on OMR sheet.**

4. No identification mark, other than where asked for, on the OMR sheet, is permitted. If done so, the OMR sheet is liable to be treated as cancelled. The decision of the Secretary, Pareeksha Bhavan in this regard shall be final.

5. If at any stage OMR sheet of a candidate shows or it is otherwise established that he/she has received or attempted to receive help from any source in any manner or has given help or attempted to give help to other candidate in any manner, the relevant OMR sheet and his/her candidature for K-TET-2012 will be cancelled. The decision of the Secretary, Pareeksha Bhavan in this regard shall be final.

**Space For Rough Work**

# Kerala Teacher Eligibility Test - August, 2012
## Category I – LP Section
## (Part - 2) Kannada

**I. ನೀಡಿರುವ ಗದ್ಯಭಾಗವನ್ನು ಓದಿ ಸೂಚನೆಯಂತೆ ಉತ್ತರಿಸಿರಿ.**

ಕನ್ನಡ ಕಾವ್ಯಕ್ಕೆ, ಕಾವ್ಯವಾಚನಕ್ಕೆ ಬಹುದೊಡ್ಡ ಪರಂಪರೆಯಿದೆ. ಇತಿಹಾಸವಿದೆ. ಹಿಂದೆಂದೂ ಕಾವ್ಯಕ್ಕೆ ಯಾವ ರೀತಿಯ ಅನಾದರ, ಅನಾಸ್ಥೆಯೂ ಇದ್ದಿರಲಿಲ್ಲ. ಪಂಪ ರನ್ನಾದಿಗಳ ಕಾಲದಲ್ಲೂ ರಾಜರ, ರಾಜೋಪಜೀವಿಗಳ ಮುಂದೆ ಕಾವ್ಯದ ಓದು ಗಂಭೀರವಾಗಿ ನಡೆಯುತ್ತಿತ್ತು. ವಚನಕಾರರೂ ತಮ್ಮ ವಚನಗಳನ್ನು ಸರೀಕರ ಮುಂದೆ, ಇತರ ಅನುಭಾವಿಗಳ ಮಧ್ಯೆ ಇಡುತ್ತಿದ್ದರು. ಅವರ ಸಂವಾದಗಳೆಲ್ಲ ಇದೇ ರೂಪದಲ್ಲಿ ನಡೆಯುತ್ತಿತ್ತು. ಕುಮಾರವ್ಯಾಸಭಾರತ, ಜೈಮಿನಿಭಾರತ ತೊರವೆರಾಮಾಯಣಗಳ ವಾಚನವಂತು ಮನೆಮನೆಯಲ್ಲಿ ಜರಗುತ್ತಿದ್ದವು. ಸರ್ವಜ್ಞ, ದಾಸಕೂಟದ ಸದಸ್ಯರು ಇವರೆಲ್ಲ ತಮ್ಮ ಕೃತಿಗಳನ್ನು ಜನರಿಗೆ ನೇರವಾಗಿ ಒಪ್ಪಿಸುತ್ತಿದ್ದುದು ರೂಢಿಯಾಗಿತ್ತು. ನವೋದಯ ಕಾಲದಲ್ಲೂ ಕಾವ್ಯ ರಾಷ್ಟ್ರೀಯತೆಯನ್ನು ಪ್ರೇರಿಸುವ ನೆವದಲ್ಲಿ ಜನರ ಹಾಗೂ ಕವಿಗಳ ನಾಲಿಗೆಯಲ್ಲಿ ಕುಣಿಯುತ್ತಿತ್ತು. ಇಲ್ಲೆಲ್ಲ ಸಂಗೀತ ಅಥವಾ ಗೇಯತೆ ತರತಮ ಮಟ್ಟದಲ್ಲಿ ಕಾವ್ಯದ ಸಹಾಯಕ್ಕೆ ಬರುತ್ತಿತ್ತು. ಇವುಗಳ ಬಗೆಗೆ ವಿಚಿತ್ರ ದ್ವೇಷವನ್ನು ಆರೋಪಿಸಿಕೊಂಡ ನವ್ಯಕಾವ್ಯ ಒಂದು ಹಠಯೋಗದ ಹಾಗೆ ಅವನ್ನು ಬಹಿಷ್ಕರಿಸಿತು. ಮಾತ್ರವಲ್ಲದೆ ಕಾವ್ಯದ ಕೆಲವು ಅಮೂಲ್ಯ ಗುಣಗಳಾದ ಸಂಗೀತ, ಗೇಯತೆ, ನಾದಮಯತೆಗಳನ್ನು ನಿರ್ದಾಕ್ಷಿಣ್ಯವಾಗಿ ಕತ್ತರಿಸಿ ಹಾಕಿ ಪದ್ಯಕ್ಕೂ ಗದ್ಯಕ್ಕೂ ವ್ಯತ್ಯಾಸವೇ ಇಲ್ಲ ಎನ್ನುವ ಅಂಚಿಗೆ ಬಂದು ನಿಂತಿತು. ಇದೇ ಕನ್ನಡ ಕಾವ್ಯಕ್ಕೆ ಬಂದ ದುರಂತ.

**91.** ಕನ್ನಡ ಕಾವ್ಯಕ್ಕೆ ದುರಂತ ಬಂದೊದಗಿದ ಕಾಲ ಘಟ್ಟ

(A) ನವೋದಯ ಕಾಲ  (B) ನವ್ಯಕಾಲ

(C) ಪಂಪ ರನ್ನಾದಿಗಳ ಕಾಲ  (D) ವಚನಕಾರರ, ದಾಸರ ಕಾಲ

**92.** ವಚನಕಾರರು ತಮ್ಮ ವಚನಗಳನ್ನು ಸರೀಕರ ಮುಂದೆ, ಇತರ ಅನುಭಾವಿಗಳ ಮಧ್ಯೆ ಇಡುತ್ತಿದ್ದರು.–ಇಲ್ಲಿ ಬಂದಿರುವ ಅನುಭವ, ಅನುಭಾವಿ ಪದಗಳ ಅರ್ಥವನ್ನು ತರಗತಿಯಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ತಿಳಿಸಿಕೊಡುವ ವಿಧಾನ

(A) ಪದಗಳ ಅರ್ಥಗಳನ್ನು ನೇರವಾಗಿ ತಿಳಿಸಿಕೊಡುವುದರ ಮೂಲಕ

(B) ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಪ್ರಯೋಗಿಸುವುದರ ಮೂಲಕ

(C) ವಿರೋಧಾರ್ಥಗಳನ್ನು ತಿಳಿಸುವುದರ ಮೂಲಕ

(D) ಶಬ್ದಕೋಶವನ್ನು ಬಳಸುವುದರ ಮೂಲಕ

**93.** 'ಕಾವ್ಯ ರಾಷ್ಟ್ರೀಯತೆಯನ್ನು ಪ್ರೇರಿಸುವ ನೆವದಲ್ಲಿ ಜನರ ಹಾಗೂ ಕವಿಗಳ ನಾಲಗೆಯಲ್ಲಿ ಕುಣಿಯುತ್ತಿತ್ತು.' 'ನಾಲಗೆಯಲ್ಲಿ ಕುಣಿಯುತ್ತಿತ್ತು' ಈ ಮಾತು ಕೆಳಗಿನವುಗಳಲ್ಲಿ ಯಾವುದಕ್ಕೆ ಹೊಂದಿಕೆಯಾಗುತ್ತದೆ ?

(A) ಕಾವ್ಯ ಕಂಠಪಾಠವಾಗಿತ್ತು

(B) ಕವಿಗಳನ್ನು ಹೊಗಳುತ್ತಿದ್ದರು

(C) ಕಾವ್ಯವನ್ನು ರಾಗ ತಾಳ ಲಯ ಬದ್ಧವಾಗಿ ಹಾಡುತ್ತಿದ್ದರು

(D) ಕಾವ್ಯದ ಗತಿ ನಿಧಾನವಾಗಿತ್ತು

**94.** ಹಾಡು, ಓದು– ಇವು ಯಾವ ವ್ಯಾಕರಣ ರೂಪಕ್ಕೆ ಉದಾಹರಣೆ

(A) ನಾಮಪದ (B) ಕ್ರಿಯಾಪದ

(C) ಕಾರಕಪದ (D) ಧಾತು

**95.** ಕಾವ್ಯಕ್ಕೆ, ಕಾವ್ಯದ, ವಚನಗಳನ್ನು, ರೂಪದಲ್ಲಿ– ಇಲ್ಲಿ ಕಂಡುಬರುವ ವಿಭಕ್ತಿಗಳ ಅನುಕ್ರಮಣಿಕೆ

(A) ಚತುರ್ಥಿ, ಷಷ್ಠಿ ದ್ವಿತೀಯೆ, ಸಪ್ತಮಿ. (B) ದ್ವಿತಿಯೆ, ಷಷ್ಠಿ ಚತುರ್ಥಿ, ಸಪ್ತಮಿ

(C) ಷಷ್ಠಿ ದ್ವಿತೀಯೆ, ಸಪ್ತಮಿ, ಚತುರ್ಥಿ (D) ಸಪ್ತಮಿ, ಷಷ್ಠಿ ದ್ವಿತಿಯೆ, ಚತುರ್ಥಿ

**II. ಕೆಳಗಿನ ಕವನವನ್ನು ಓದಿ ಸೂಚನೆಯಂತೆ ಉತ್ತರಿಸಿರಿ.**

ಬಿಳಿಯ ಬಟ್ಟೆಯನುಟ್ಟು
ಎದೆಚಾಚಿ ಮುನ್ನಡೆವೆ
ಯುವಕ ! ಮೆಚ್ಚಿದೆ ನಾನು–ಮೈ ಮರೆಯಬೇಡ
ಮತ್ಸರವು ಮನದಲ್ಲಿ
ಕೊಳೆಕೆಸರು ಕೈಯಲ್ಲಿ
ಕಣ್ ನಿನ್ನ ಮೈಯಲ್ಲಿ ಸುತ್ತಲುಂ ನೋಡ !
ತಿರುಪತಿಯ ಬೆಟ್ಟಕ್ಕೆ
ಪುಣ್ಯಮಯ ಪಟ್ಟಕ್ಕೆ
ಏರುತೇರುತೆ ಮುಂದೆ ಸಾರಿ ಹೋಗುತಿರೆ
ನಿನ್ನ ಜತೆಗಿದ್ದವನು
ಬೆನ್ನ ಹಿಂದಿದ್ದವನು
ಏರಿ ಸೋತಿರೆ ಹಿಂದಕೆಳೆವ ನೋಡದಿರೆ
ಹಸಿರು ಬೆಳೆ ಹೊಲವನ್ನು
ಪಶುಜಾತಿ ನೋಳ್ಪಂತೆ
ನಿನ್ನ ಕೀರ್ತಿಯ ಕಂಡು ಕಣ್ಬಿಡುವರು
ದೃಢವಾದ ದೇಹವನು
ರೋಗಾಣು ಕೆಡಿಪಂತೆ
ಬಾಳುವೆಯ ಬಟ್ಟಲಲಿ ನಂಜೆರೆವರು
ಕೊಳಕು ಜನರಿಹರೆಂದು
ಕೊಳೆ ಬಟ್ಟೆಯುಡಬೇಡ
ತಲೆಯ ತಗ್ಗಿಸಬೇಡ ಧೀರ ಯುವಕ
ಬಿಳಿಯ ಬಟ್ಟೆಯನುಟ್ಟು
ಎದೆಚಾಚಿ ಮುನ್ನಡೆದೆ
ತುಂಬಿದಾಯುಷ್ಯದಲಿ ಬಾಳಿ ಬದುಕ

**96.** 'ದೃಢವಾದ ದೇಹವನು ರೋಗಾಣು ಕೆಡಿಪಂತೆ ಬಾಳುವೆಯ ಬಟ್ಟಲಲಿ ನಂಜೆರೆವರು' ಇಲ್ಲಿ ಪ್ರಯೋಗವಾದ ಅಲಂಕಾರ ಯಾವುದು ?

(A) ಉಪಮೆ (B) ಉತ್ಪ್ರೇಕ್ಷೆ

(C) ದೃಷ್ಟಾಂತ (D) ರೂಪಕ

**97.** 'ಕೊಳಕು ಜನರಿಹರೆಂದು ಕೊಳೆಬಟ್ಟೆಯುಡಬೇಡ' ಎಂದರೆ

(A) ಕೊಳಕು ಪರಿಸರದಲ್ಲಿ ಶುಭ್ರತೆಗೆ ಹೆಚ್ಚು ಬೆಲೆ ಇರುತ್ತದೆ

(B) ಕೊಳಕು ಜನರ ಮಧ್ಯೆ ಶುಭ್ರ ವಸ್ತ್ರ ಉಟ್ಟು ಹೋಗಬೇಕು

(C) ಪರಿಸರ ಕೆಟ್ಟಿದೆ ಎನ್ನುವ ಕಾರಣಕ್ಕೆ ತಾನೂ ಕೆಡಬಾರದು

(D) ಜನರು ಕೊಳಕರಾಗಿದ್ದರೂ ಅವರ ಮನಸ್ಸು ಕೊಳಕಲ್ಲ

**98.** 'ಕೊಳೆಕೆಸರು ಕೈಯಲ್ಲಿಕಣ್ ನಿನ್ನ ಮೈಯಲ್ಲಿ' – ಈ ವಾಕ್ಯಾಂಶ ಉದ್ದೇಶಿಸುವ ಅರ್ಥ

(A) ಇನ್ನೊಬ್ಬನ ಏಳಿಗೆಯನ್ನು ಬಯಸುವವರು

(B) ಮಾನಸಿಕವಾಗಿ ನೊಂದವರು

(C) ಸುತ್ತುಮುತ್ತಲೂ ಕೆಟ್ಟದ್ದನ್ನೇ ಕಾಣುವವರು

(D) ಹೊಲಗಳಲ್ಲಿ ದುಡಿಯುವವರು

**99.** 'ಮತ್ಸರವು ಮನದಲ್ಲಿ

ಕೊಳೆಕೆಸರು ಕೈಯಲ್ಲಿ' ಈ ಸಾಲುಗಳಲ್ಲಿ

(A) ಆದಿಪ್ರಾಸವಿದೆ (B) ಅಂತ್ಯಪ್ರಾಸವಿದೆ

(C) ಉತ್ಪ್ರೇಕ್ಷೆಯಿದೆ (D) ಹೋಲಿಕೆಯಿದೆ

**100.** ಈ ಕವಿತೆಯ ಸಂದೇಶ

(A) ಕೆಡುಕು ಬಗೆವವರ ಬಗ್ಗೆ ಎಚ್ಚರಿಕೆಯಿಂದಿರು ಮತ್ತು ಬದುಕಿನಲ್ಲಿ ಧೈರ್ಯದಿಂದ ಮುಂದೆಹೋಗು

(B) ಜೊತೆಗಿದ್ದವರನ್ನು ಹಿಂದಿಕ್ಕಿ ನೀನೊಬ್ಬನೇ ಮುಂದುವರಿ

(C) ಬಿಳಿ ಬಟ್ಟೆಯನ್ನುಟ್ಟು ಯಾರಿಗೂ ಹೆದರದೆ ಮುಂದೆಹೋಗು

(D) ಯಾರನ್ನೂ ಲಕ್ಷಿಸದೆ ಬದುಕು

## III. Pedagogy

**101.** ಗಾಳಿಮರದ ಕುರಿತಾಗಿರುವ ಪಾಠದ ಆರಂಭದಲ್ಲಿ ಗಾಳಿಮರದ ಪರಿಚಯವನ್ನು ಪರಿಣಾಮಕಾರಿಯಾಗಿ ಮಾಡಿಕೊಡುವ ವಿಧಾನ

(A) ಕರಿಹಲಗೆಯಲ್ಲಿ ಚಿತ್ರ ಬರೆದು ತೋರಿಸುವುದು

(B) ಗಾಳಿಮರದ ಕುರಿತಾಗಿರುವ ಕತೆಗಳನ್ನು ಹೇಳುವುದು

(C) ಗಾಳಿಮರದ ಹತ್ತಿರ ಕೊಂಡೊಯ್ದು ತೋರಿಸುವುದು

(D) ಹತ್ತಿರದ ಯಾವುದಾದರೊಂದು ಮರ ತೋರಿಸುವುದು

**102.** ಓದುಗಾರಿಕೆ, ಆಲಿಸುವಿಕೆ, ಬರೆಯುವಿಕೆ, ಮಾತುಗಾರಿಕೆ – ವಿದ್ಯಾರ್ಥಿಗಳ ಭಾಷಾ ವಿಕಾಸಕ್ಕೆ ಸಹಕರಿಸುವ ಈ ಕೌಶಲಗಳನ್ನು ಅನುಕ್ರಮವಾಗಿ ಹೇಗೆ ಜೋಡಿಸಬಹುದು ?

(A) ಓದುಗಾರಿಕೆ, ಆಲಿಸುವಿಕೆ, ಬರೆಯುವಿಕೆ, ಮಾತುಗಾರಿಕೆ

(B) ಬರೆಯುವಿಕೆ, ಮಾತುಗಾರಿಕೆ, ಓದುಗಾರಿಕೆ, ಆಲಿಸುವಿಕೆ

(C) ಮಾತುಗಾರಿಕೆ, ಓದುಗಾರಿಕೆ, ಬರೆಯುವಿಕೆ, ಆಲಿಸುವಿಕೆ

(D) ಆಲಿಸುವಿಕೆ, ಮಾತುಗಾರಿಕೆ, ಓದುಗಾರಿಕೆ, ಬರೆಯುವಿಕೆ

**103.** ಅಧ್ಯಾಪಕರು ತರಗತಿಗಳಲ್ಲಿ ಚಾರ್ಟುಗಳನ್ನು ಉಪಯೋಗಿಸುವುದರ ಮುಖ್ಯ ಉದ್ದೇಶ.

(A) ಪಠ್ಯ ಬೋಧನೆಯನ್ನು ಸುಗಮಗೊಳಿಸಲು

(B) ವಿಷಯದ ಕೇಂದ್ರ ಆಶಯವನ್ನು ಸ್ಪಷ್ಟಪಡಿಸಲು

(C) ವಿದ್ಯಾರ್ಥಿಗಳ ಗಮನ ಸೆಳೆಯಲು

(D) ವಿಷಯವನ್ನು ವಿವರಿಸಲು

**104.** ವಿದ್ಯಾರ್ಥಿಗಳು 'ಧನ'ವನ್ನು 'ದನ' ಎಂದೂ, 'ಮನೆ'ಯನ್ನು 'ಮಣೆ' ಯೆಂದು ಉಚ್ಚರಿಸುವರಾದರೆ ಇಂತಹ ಉಚ್ಚಾರ ದೋಷಗಳನ್ನು ಅಧ್ಯಾಪಕರು ಹೇಗೆ ಪರಿಹರಿಸಬಹುದು ?

(A) ಅಂತಹ ಪದಗಳ ಅರ್ಥವ್ಯತ್ಯಾಸವನ್ನು ತಿಳಿಸಿಕೊಡುವುದು

(B) ಕನಿಷ್ಠ ಯುಗ್ಮಗಳನ್ನು ವಾಕ್ಯಗಳಲ್ಲಿ ಪ್ರಯೋಗಿಸಿ ಅರ್ಥ ಸ್ಪಷ್ಟತೆ ನೀಡುವುದು

(C) ಕರಿಹಲಗೆಯಲ್ಲಿ ಬರೆದು ವಿವರಿಸುವುದು

(D) ರಕ್ಷಕರಿಗೆ ಹೇಳಿ ಸರಿಪಡಿಸುವುದು

**105.** ವಿಕಲಚೇತನ ವಿದ್ಯಾರ್ಥಿಯು ಎಲ್ಲರೊಂದಿಗೆ ಸೇರಲು ಹಿಂಜರಿಯುತ್ತಾನೆ ಎಂದಾದರೆ ಅಧ್ಯಾಪಕರು ಇದನ್ನು ಯಾವ ರೀತಿ ಪರಿಹರಿಸಬಹುದು ?

(A) ಎಲ್ಲರೊಂದಿಗೆ ಸೇರಲು ನಿರಂತರ ಪ್ರೋತ್ಸಾಹಿಸುವುದು

(B) ಕೊರತೆಯನ್ನು ಎತ್ತಿ ತೋರಿಸುವುದು

(C) ವಿದ್ಯಾರ್ಥಿಯನ್ನು ಪ್ರತ್ಯೇಕವಾಗಿರಿಸುವುದು

(D) ವಿದ್ಯಾರ್ಥಿಯ ದೋಷವನ್ನು ಎಲ್ಲರೆದುರು ಗುರುತಿಸುವುದು

**106.** ವಿದ್ಯಾರ್ಥಿಗಳಿಗೆ ಗಣಕಯಂತ್ರದ ಸಹಾಯದಿಂದ ಕನ್ನಡದಲ್ಲಿ ತಮ್ಮ ಲೇಖನಗಳನ್ನು ತಯಾರಿಸುವುದಕ್ಕೆ ಸಹಕಾರಿಯಾದ ಲಿಪಿ ಯಾವುದು ?

(A) ಏರಿಯಲ್

(B) ಕಾರ್ತಿಕ

(C) ನುಡಿ

(D) ವಾಣಿ

**107.** ಪಾಠ ಮಾಡುತ್ತಿರುವ ಸಂದರ್ಭದಲ್ಲಿ ಹಗಲುಕನಸು ಕಾಣುವ ವಿದ್ಯಾರ್ಥಿಗಳ ಗಮನವನ್ನು ಅಧ್ಯಾಪಕರು ಹೇಗೆ ತಮ್ಮ ಕಡೆ ಸೆಳೆಯಬಹುದು ?

(A) ಗಟ್ಟಿ ಸ್ವರದಲ್ಲಿ ಮಾತನಾಡುವ ಮೂಲಕ

(B) ತರಗತಿಯಿಂದ ಹೊರ ಕಳುಹಿಸುವುದರ ಮೂಲಕ

(C) ನಡುನಡುವೆ ಪ್ರಶ್ನೆ ಕೇಳಿ ವಿಷಯವನ್ನು ಪುನರಾವರ್ತನೆ ಮಾಡುವುದರ ಮೂಲಕ

(D) ವಿದ್ಯಾರ್ಥಿಗಳನ್ನು ಗದರಿಸುವುದರ ಮೂಲಕ

**108.** ವಿದ್ಯಾರ್ಥಿಗಳಲ್ಲಿ ವಿಶ್ಲೇಷಣೆ ಮತ್ತು ಸಂಶ್ಲೇಷಣಾ ಸಾಮರ್ಥ್ಯವನ್ನು ಹೆಚ್ಚಿಸಲು ಈ ಕೆಳಗಿನ ಯಾವ ಚಟುವಟಿಕೆಯನ್ನು ಕೊಡಬಹುದು ?

(A) ಕಥೆ ಹೇಳಿಸುವುದು ಮತ್ತು ಬರೆಸುವುದು

(B) ಕಾವ್ಯ ವಾಚನ ಮಾಡಿಸುವುದು

(C) ಸಾರ ವಿಸ್ತರಣೆ ಮತ್ತು ಸಾರ ಸಂಗ್ರಹ ಮಾಡಿಸುವುದು

(D) ಹಾಸ್ಯ ಬರಹಗಳನ್ನು ಬರೆಸುವುದು

**109.** ಪ್ರಾಥಮಿಕ ಹಂತದ ವಿದ್ಯಾರ್ಥಿಗಳ ಪಠ್ಯ ತಯಾರಿಕೆಯಲ್ಲಿ ಆಟಗಳಿಗೆ ಪ್ರಾಧಾನ್ಯತೆ ನೀಡಲಾಗಿದೆ ಯಾಕೆ ?

(A) ಅಧ್ಯಾಪಕರಿಗೆ ವಿಶ್ರಾಂತಿ ಸಿಗುವುದು

(B) ಆಟಗಳು ವಿದ್ಯಾರ್ಥಿಗಳಿಗೆ ಇಷ್ಟವಾದುವು

(C) ಆಟಗಳು ವಿದ್ಯಾರ್ಥಿಗಳ ಬೆಳವಣಿಗೆ ಮತ್ತು ವಿಕಾಸಕ್ಕೆ ಸಹಕರಿಸುತ್ತವೆ

(D) ಗೃಹಕಾರ್ಯಗಳ ಹೊರೆಇಲ್ಲ

**110.** ವಿದ್ಯಾರ್ಥಿಗಳ ಬೆಳವಣಿಗೆಗೆ ಪ್ರೇರಣೆಯನ್ನು ಒದಗಿಸುವಲ್ಲಿ ಸಹಕಾರಿಯಾದುದು

(A) ಅನುಕಂಪ

(B) ಪ್ರೋತ್ಸಾಹ

(C) ಶಿಕ್ಷೆ

(D) ಸಹಾನೂಭೂತಿ

## IV. Content

**111.** 'ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ' ಈ ಗಾದೆಯ ಅರ್ಥ

(A) ಒಳ್ಳೆಯವರು ತಯಾರಿಸಿದ್ದನ್ನು ಕೆಟ್ಟವರು ನಾಶಮಾಡುತ್ತಾರೆ

(B) ಕಷ್ಟಪಟ್ಟು ಮಾಡಿದ್ದು ಬೇಗನೆ ನಾಶವಾಗುತ್ತದೆ

(C) ತಯಾರಿಸುವುದು ಕಷ್ಟ, ನಾಶಮಾಡುವುದು ಸುಲಭ

(D) ಮಡಿಕೆಗಿಂತ ದೊಣ್ಣೆಯೇ ಶಕ್ತಿಶಾಲಿ

**112.** 'ಮುಂಬಯಿ ನಗರದಲ್ಲಿ ನಾಲ್ಕು ಬಾಂಬುಗಳು ಏಕಕಾಲಕ್ಕೆ ಸಿಡಿಯಿತು' – ಈ ವಾಕ್ಯದಲ್ಲಿ ತಪ್ಪಾಗಿ ಬಳಕೆಯಾದ ಪದ

(A) ಕ್ರಿಯಾ ಪದ (B) ಕ್ರಿಯಾ ವಿಶೇಷಣ

(C) ನಾಮಪದ (D) ಸಂಖ್ಯಾ ವಾಚಕ

**113.** ಸರಿಯಾದ ರೂಪವನ್ನು ಗುರುತಿಸಿರಿ

(A) ಗಧಾಯುದ್ಧ (B) ಗದಾಯುದ್ದ

(C) ಗದಾಯುದ್ಧ (D) ಗಧಾಯುಧ

**114.** ಕುವೆಂಪು ಅವರ ಕೃತಿ

(A) ಐಕ್ಯಗಾನ (B) ಕಪ್ಪು ಹಂಸ

(C) ಗಂಗಾಮಾಯಿ (D) ಪಕ್ಷಿಕಾಶಿ

**115.** 'ನೀನು' ಎನ್ನುವುದು ಈ ಕೆಳಗಿನ ಸರ್ವನಾಮ ರೂಪ

(A) ಪ್ರಥಮ ಪುರುಷ ಏಕವಚನ (B) ಮಧ್ಯಮ ಪುರುಷ ಏಕವಚನ

(C) ಮಧ್ಯಮ ಪುರುಷ ಬಹುವಚನ (D) ಉತ್ತಮ ಪುರುಷ ಏಕವಚನ

**116.** 'ದಾಟು' ಕೃತಿಯ ಕರ್ತೃ

(A) ಎಸ್.ಎಲ್.ಭೈರಪ್ಪ (B) ಚಂದ್ರಶೇಖರ ಕಂಬಾರ

(C) ಪೂರ್ಣಚಂದ್ರ ತೇಜಸ್ವಿ (D) ವ್ಯಾಸರಾಯ ಬಲ್ಲಾಳ

**117.** ಈ ಕೆಳಗಿನವುಗಳಲ್ಲಿ ಗುಂಪಿಗೆ ಸೇರದ ಪದ ಯಾವುದು ?

(A) ಉಡುಗೊರೆ (B) ಮಡಿಕೇರಿ

(C) ಮದುವೆ (D) ಕಲ್ಯಾಣ ಮಂಟಪ

**118.** ಆನಱಿವೆಂ ಪೃಥೆಯಱಿವಳ್

ದಾನವರಿಪುವಱಿವನರ್ಕನಱಿವಂ ದಿವ್ಯ

ಜ್ಞಾನಿ......- ಈ ಪದ್ಯ ಸಾಲುಗಳು ಯಾವ ಛಂದಸ್ಸಿನಲ್ಲಿದೆ ?

(A) ಕಂದ (B) ರಗಳೆ

(C) ಷಟ್ಪದಿ (D) ಚೌಪದಿ

**119.** 'ಸುಪ್ರಸಿದ್ಧ' ಈ ಪದದ ವಿರುದ್ಧಾರ್ಥಕ ಪದ ಯಾವುದು

(A) ವಿಖ್ಯಾತ (B) ಕುಪ್ರಸಿದ್ಧ

(C) ಅಪ್ರಬುದ್ಧ (D) ಅಪ್ರಸಿದ್ಧ

**120.** ಅಧಃಪತನಗೊಳ್ಳು ಎಂದರೆ

(A) ಮೇಲೆ ಬೀಳು (B) ನಾಶವಾಗು

(C) ನಷ್ಟಹೊಂದು (D) ಮೋಸಹೋಗು

**Space For Rough Work**

6. For answering questions, candidates are advised to follow instruction strictly given in the question paper and on the OMR sheet.

**7. There will be no negative marking**

8. The candidate must return the question booklet and answersheet (OMR sheet) to the invigilator before leaving the examination centre. However, student must collect carbon/duplicate copy of attempted OMR sheet from Invigilator before leaving the examination hall.

**Don't rub, erase, cut, fold or overwrite on the OMR sheets.**


Cutting or overwriting in any box provided for answering question will be deemed to be an incorrect answer.

## <u>INSTRUCTIONS FOR FILLING THE OMR (ANSWER SHEET)</u>

a. USE ONLY DARK BLUE/BLACK BALL POINT PEN for writing and marking the ovals.

b. To answer questions, dark only one oval (○○○○) with black/dark blue ink, which you consider correct, corresponding to a specific question.

c. Mark your answer in the appropriate oval against the number corresponding to the question you are answering, e.g. correct way to mark answer 10 (C) is:




**d. The following way of marking should be avoided.**



e. If you darken more than one ovals, your answer will be treated as wrong.

f. Do not put any stray mark anywhere on the OMR (answer sheet) other than marking in the chosen response.

g. Do not fold, multiple, tear or wrinkle the answer sheet.

h. Don't use backside of OMR sheet for rough work.

i. Since the sheet will be processed by a machine, write and mark the ovals in the appropriate space only.

**For rough work, use only the pages marked as rough work in the Question Paper Booklet.**

| | |
|---|---|
| | |
| **Signature of the Candidate** | **Signature of the Invigilator** |